ನೀರಾಕೋದು, ಕಳೆಕೀಳೋದು, ಆಗಾಗ ಸರವಿ ಆಳ್ತದಲ್ಲಿಟ್ಟುಕೊಳ್ಳೋದು. ಕಾಟ್ಮಾರಯ್ಯನಿಗದು ನೀರು ಕುಡಿದಷ್ಟು ಸಲೀಸಾಗಿ ಮಾಡುವಂತದ್ದಾಗಿತ್ತು. ಕಾಟ್ಮಾರಯ್ಯನ ಕೆಲಸ ಆ ಮನೆಯವರಿಗೂ ಇಷ್ಟವಾಗಿತ್ತು. ಹಿಂಗಿರುವಾಗ ಅಪ್ಪ ಅದನ್ನು ಒಲ್ಲೆ ಅಂದದ್ದು ಚಿಕ್ಬಸವನಿಗಷ್ಟು ಇಷ್ಟವಾಗಿರಲಿಲ್ಲ. ಒಂದೆರಡು ದಿನ ಹಂಗಾಡಿ ಸುಮ್ಮನಾಗ್ತಾನೆ ಅಂದುಕೊಂಡು ತೆಪ್ಪಗಿದ್ದ. ಆದರೆ ಮತ್ತೆ, 'ನಾನೇಳಿದ್ದೇನ್ಮಾಡ್ಡಲಾ ಮಗಾ' ಅಂತ ಕಾಟ್ಮಾರಯ್ಯ ಕೇಳಿದ್ದರಿಂದ, 'ಅಲ್ಲಾ ಆ ಕೆಲ್ಸ ಏನಾಗೈತಪ್ಪ, ಅಲ್ಲಿ ಕಡ್ದು ಕಟ್ಟೆ ಆಕಾಂಥದ್ದು ಏನೈತೆ ಹೇಳು' ಅಂತ ಸಿಡಿಮಿಡಿಗೊಂಡಿದ್ದ. ಮಗನ ಮಾತುಗಳಿಂದ ಸಪ್ಪಗಾಗಿದ್ದ ಕಾಟ್ಮಾರಯ್ಯ ಮತ್ತೊಂದಷ್ಟು ದಿನ ಹಂಗೇ ತಳ್ಳಿ ಕಡೆಗೆ ಬಿಲ್ಕುಲ್ ಹೋಗಲ್ಲ ಅಂತ ಮನೇಲೇ ಕೂತುಬಿಟ್ಟಿದ್ದ. ಚಿಕ್ಬಸವ ಯಾಕೇಂತ ಕೇಳುವ ಗೋಜಿಗೂ ಹೋಗದೆ ಸುಮ್ಮನಿದ್ದದ್ದರಿಂದ ಇರುಸುಮುರುಸುಗೊಂಡವನಂತೆ, 'ಯಾಕಲಾ ಹಂಗೆ ಬಿಗುತ್ಕಂಡಿದೀಯಾ' ಅಂದಿದ್ದ. 'ಇನ್ನೇನ್ ಮತ್ತೆ ಸಿಕ್ಕಿದ್ನೆಲ್ಲಾ ಬಿಟ್ಕಂತಾ ಹೋದ್ರೆ' ಚಿಕ್ಬಸವ ಹೆಚ್ಚೇ ಸಿಡುಕಿದ್ದ. 'ಅಲ್ಲಿ ಆ ಗಿಡ್ಗುಳ್ ನೋಡ್ತುದ್ರೆ ನಂಗೆ ನಮ್ಮ ತ್ವಾಟ, ಹೊಲ ನೆಪ್ವಾಗಿ ಜೀವ ಹಿಂಡಿದಂಗಾಗುತ್ತೆ' ಅನ್ನುತ್ತಾ ಎಪ್ಪತ್ತರ ಹತ್ತಿರತ್ತಿರವಿದ್ದ ಕಾಟ್ಮಾರಯ್ಯ ಹನಿಗಣ್ಣಾಗಿದ್ದ. ಕಡೆಗೆ ಮನೆಗೆ ಹತ್ತಿರದಲ್ಲಿದ್ದ ದಿನಸಿ ಅಂಗಡಿಯೊಂದರಲ್ಲಿ ಮತ್ತೊಂದು ಕೆಲಸ ಹುಡುಕಿದ್ದ ಚಿಕ್ಬಸವ. ದಿನೊಪ್ಪತ್ತು ಅನ್ನೋದರೊಳಗೆ 'ನಂಗಿದೂ ಬ್ಯಾಡ' ಅಂದುಬಿಟ್ಟಿದ್ದರಿಂದ, 'ಇದು ಆಗೋ ಹೋಗೋ ಮಾತಲ್ಲ ಮನೇಲೇ ಇದ್ದುಬಿಡ್ಲಿ' ಅನ್ನುವ ತೀರ್ಮಾನಕ್ಕೆ ಬಂದಿದ್ದ ಚಿಕ್ಬಸವ. ಅಂದಿನಿಂದ ಸಣ್ಮಾದಮ್ಮ ಒಂದಷ್ಟು ಜಾಸ್ತಿ ಹೂಗಳನ್ನು ತಂದು ಕಟ್ಟುತ್ತಾ, ಕಟ್ಟಿದವುಗಳನ್ನು ಅಂಗಡಿಗಳಿಗೆ ಕೊಡುವ ಕೆಲಸ ಮಾಡತೊಡಗಿದ್ದ ಕಾಟ್ಮಾರಯ್ಯ, ಚಿಕ್ಬಸವ ಊರಿಗೋಗಿ ಬಂದ ಲಾಗಾಯ್ತಿನಿಂದ ಆ ಕೇಮೆಗೂ ಕಣ್ಣೆ ಎಸೆದಿದ್ದ.

## 3

ಮಗ ಶಾಸ್ತ್ರದ ಮಳ್ಳಜ್ಜನನ್ನು ಕಾಣೋ ಸಲುವಾಗಿ ಮತ್ತೆ ಊರಿಗೆ ಹೋಗಲು ಒಪ್ಪಿದ್ದರಿಂದ ಸಣ್ಮಾದಮ್ಮ ಗೆಲುವಾದವಳಾಗಿ, 'ನಮ್ಮವ್ವ ಈಗ್ಲಾದ್ರೂ ಒಳ್ಳೆ ಬುದ್ಧಿ ಕೊಟ್ಟಲ್ಲ' ಅಂತ ಒಳಗೊಳಗೇ ದೇವರಿಗೆ ವಂದಿಸಿದ್ದಳು. ಮಾರನೆಯ ದಿನವೇ ಕರಿಯಮ್ಮನ ಜಾತ್ರೆ ಇದ್ದದ್ದರಿಂದ, 'ದೇವ್ರಿಗೆ ಹಣ್ಣು ಕಾಯಿ ಮಾಡ್ಸಿ ಅಪ್ಪಣೆ ಕೇಳಿದ್ರೆ ಆ ನಮ್ಮವ್ವ ಏನಾದ್ರೊಂದು ದಾರಿ ತೋರುಸ್ತಾಳೆ' ಅಂದಿದ್ದಳು ಹುರುಪಿನಲ್ಲಿ. 'ಹಬ್ಬ, ಜಾತ್ರೆ ಅಂದ್ರೂ ದೇವ್ರ ಮಕ ನೋಡ್ದುದ್ರೆ ಸುಮ್ನೆ ಬಿಡ್ತಾವೇನಪ್ಪ ಅವು ನಮ್ಮುನ್ನ' ಅಂತ ಈ ಮುಂಚೆ ಎಷ್ಟು ಗೋಗರೆದರೂ ಚಿಕ್ಬಸವ ಅವ್ವನ ಮಾತುಗಳನ್ನು ಈ ಕಿವೀಲಿ ಕೇಳಿ ಆ ಕಿವೀಲಿ ಬಿಡ್ತಿದ್ದ. ಅತಿಯಾದಾಗ, 'ನಿಂದೊಳ್ಳೆ ರ್‍ವಾತೆ ಕಣವ್ವ ಯಾವಾಗಾಂದ್ರೆ ಆವಾಗ ಹೋಗಾಕೆ ಆ ಆಫೀಸೇನು ನಮ್ಮಪ್ಪುಂದ' ಅಂತ ರೇಗುತ್ತಿದ್ದ. ಮಾತುಕೊಡಲಾಗದೆ ಸಣ್ಮಾದಮ್ಮ ಕೆಲ ದಿನ ದುಮುಗುಟ್ಟಿ ಸುಮ್ಮನಾಗುತ್ತಿದ್ದಳು. ಅವತ್ತೊಂದು ದಿನ, 'ಅತ್ತೆ ಮಾತು ಒತ್ತಟ್ಟಿಗಿರ್ಲಿ, ಬರೀ ದೇವ್ರುದಿಂಡ್ರು ಅಂತ ಕೂತ್ಕಂಡ್ರೆ ಆಗುತ್ತಾ ಒಳ್ಳೆಯ ಆಸ್ಪತ್ರೆಗೆ ತೋರಿಸ್ಬೇಕು' ಅಂತ ಹೆಂಡತಿಯಾಡಿದ ಮಾತುಗಳಿಗೂ ಚಕಾರವೆತ್ತಿರಲಿಲ್ಲ.

ಚಿಕ್ಬಸವ ಊರು ತಲುಪಿದಾಗ ಮಧ್ಯಾಹ್ನದ ಬಿಸಿಲು ತದುಕುತ್ತಿತ್ತು. ಊರೆಲ್ಲಾ ಜಾತ್ರೆಯ ಸಡಗರದಲ್ಲಿತ್ತು. ದಾರಿಯ ದೂಳೆಲ್ಲಾ ಮನೆಯ ಜಗಲಿಯಲ್ಲಿ ಕೂತಿತ್ತು. ಮನೆಯೆದುರಿನ ಕರವುಗಲ್ಲು, ಅದರ ವಾರಾಸಿಗೆ ಛತ್ರಿಯಂತೆ ಹರವಿಕೊಂಡಿದ್ದ ಬುಗರಿ ಮರ, ಸ್ವಲ್ಪ ಅತತದಲ್ಲಿದ್ದ ಕರಿಯಮ್ಮನ ಗುಡಿಗಳನ್ನು ಒಂದು ಚಣ ಕಣ್ತುಂಬಿಕೊಂಡು ಮರುಚಣ ವಪ್ಪಾರಿನತ್ತ ದಿಟ್ಟಿಸಿದ. ಅಲ್ಲಿಟ್ಟಿದ್ದ ಮರಮುಟ್ಟುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ಹತ್ತಿರ ಹೋಗಲೊರಟವನಿಗೆ ಅಲ್ಲಿ ತನ್ನ ಮರಿಗಳಿಗೆ ಮೊಲೆಯೂಡಿದ್ದ ನಾಯೊಂದು ಗುರುಗುಟ್ಟಲು ಸೀದಾ ಕೈಕೊಪ್ಪಲಿನತ್ತ ನಡೆದ. ಹೊಳೆಬಾಗಿಲು ಹಾರೊಡೆದಿತ್ತು. ವಾರುಮಾಡಿಕೊಂಡು ಒಳ ಹೋದ. ಬೇಲಿ ಪೂರಾ ತಾತಾತೂತಾಗಿತ್ತು.